# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಂಖ್ಯೆ: ಮೈನಪ್ರಾ/ಪಿಬಿ/ಶಾಬ/1066/2015-16 ದಿನಾಂಕ: 22|3|2016

**ಕಾರ್ಯಾದೇಶ**

ಗೆ,

ಶ್ರೀ.ಸಿ.ಬಾಲಚಂದ್ರ ಬಿನ್ ಲೇಟ್ ಬಿ.ಎನ್.ಚಂದ್ರಶೇಖರ್
ಶ್ರೀ.ಹೆಚ್.ಆರ್.ಸತ್ಯನಾರಾಯಣರಾವ್
ಮತ್ತು ಶ್ರೀ.ಜಿ.ಎಲ್.ಸುದರ್ಶನ್
# 12, ಮಹಾಲಕ್ಷ್ಮೀಪುರಂ,
ಎಸ್.ಎನ್.ಬಡಾವಣೆ, 2ನೇ ಹಂತ
ಬೆಂಗಳೂರು-86

ಮಾನ್ಯರೇ,

**ವಿಷಯ** : ಮೈಸೂರು ತಾಲ್ಲೋಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ, ಸರ್ವೆ ನಂ.146/2ಬಿ, 149, 150/3, ಮತ್ತು 151/3 ರಲ್ಲಿ ಒಟ್ಟು 09 ಎಕರೆ 24 ಗುಂಟೆ ಪ್ರದೇಶದಲ್ಲಿ ರಚಿಸಿರುವ ವಸತಿ ಬಡಾವಣೆಗೆ ಕಾರ್ಯಾದೇಶ ನೀಡುವ ಬಗ್ಗೆ.

**ಉಲ್ಲೇಖ** : ಲೆಕ್ಕ ಶಾಖೆಯ ಕಂಡಿಕೆ (44) ರಿಂದ (46) ರ ವರದಿ.

*-*-*-*-*-*-*-*-*-*-*

ಮೇಲ್ಕಂಡ ವಿಷಯದಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನೀವು ಪ್ರಾಧಿಕಾರಕ್ಕೆ ಪಾವತಿಸಬೇಕಾಗಿದ್ದ ಶುಲ್ಕ **ರೂ.6,90,000/-**ಗಳನ್ನು ಉಲ್ಲೇಖ (1) ರಂತೆ ಪಾವತಿಸಿರುವುದರಿಂದ, ಬಡಾವಣೆಯ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು ಈ ಕೆಳಕಂಡ ಷರತ್ತುಗಳೊಡನೆ ಕಾರ್ಯಾದೇಶವನ್ನು ನೀಡಲಾಗಿದೆ.

1. ಎಲ್ಲಾ ನಿರ್ಮಾಣ ನಕ್ಷೆಗಳನ್ನು ಮತ್ತು ಸ್ಟ್ರಕ್ಚರಲ್ ಡ್ರಾಯಿಂಗ್‌ಗಳನ್ನು ನಿರ್ಧಿಷ್ಟವಾದ ಕೋಡ್‌ಗಳಿಗೆ ಅನುಗುಣವಾಗಿ ಮತ್ತು ಭೌತಿಕ ಸ್ಥಿತಿಗೆ ಅನುಗುಣವಾಗಿ ತಯಾರಿಸಿ ಸಂಭಂಧಪಟ್ಟ ವಲಯಕ್ಕೆ ಸಲ್ಲಿಸಿ, ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಸಂಬಂಧಪಟ್ಟ ವಲಯಾಧಿಕಾರಿಯಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ನಿರ್ವಹಿಸತಕ್ಕದ್ದು. ಒಂದು ವೇಳೆ ಅನುಮೋದನೆ ಪಡೆಯದೆ ಕಾಮಗಾರಿಯನ್ನು ನಿರ್ವಹಿಸಿದರೆ ಪ್ರಾಧಿಕಾರವು ಜವಾಬ್ದಾರಿಯಲ್ಲ.
2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಪೇಕ್ಷಣಾ ಪತ್ರ ಪಡೆದು ಸಂಬಂಧಪಟ್ಟ ವಲಯ ಅಧಿಕಾರಿಗಗೆ ಸಲ್ಲಿಸಿ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದು.
3. ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.
4. ವಿನ್ಯಾಸದಲ್ಲಿನ ರಸ್ತೆ ಕಾಮಗಾರಿ ಕೆಲಸಗಳು, ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಸೌಕರ್ಯ ಕಾಮಗಾರಿಗಳನ್ನು ಪ್ರಾಧಿಕಾರದ ನಿರ್ದೇಶನಗಳ ಪ್ರಕಾರ ಪೂರ್ಣಗೊಳಿಸತಕ್ಕದ್ದು.
5. ಪ್ರಾಧಿಕಾರದಿಂದ ನಿವೇಶನಗಳ ಬಿಡುಗಡೆ ಪಡೆದ ನಂತರ ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸತಕ್ಕದ್ದು.
6. ನಿಗದಿತ ಅವಧಿಯೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು, ಒಂದು ವೇಳೆ ಪೂರ್ಣಗೊಳಿಸದಿದ್ದಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ 1987 ಪ್ರಕರಣ 34ರ ಅಡಿಯಲ್ಲಿ ಪ್ರಾಧಿಕಾರವು ಮುಂದಿನ ಕ್ರಮ ತೆಗೆದುಕೊಳ್ಳುವುದು.
7. ವಿನ್ಯಾಸದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವ ಮೊದಲು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ / ರಹದಾರಿ ಪಡೆಯತಕ್ಕದ್ದು.
8. ಮಳೆನೀರು ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.
9. ವಿನ್ಯಾಸದಲ್ಲಿನ ರಸ್ತೆಗಳ ಬದಿಗಳಲ್ಲಿ ಸಾಲು ಮರಗಳನ್ನು ಬೆಳೆಸಲು ಸಸಿಗಳನ್ನು ನೆಡತಕ್ಕದ್ದು.
10. ಎಲ್ಲಾ ಕಾಮಗಾರಿ ಕೆಲಸಗಳನ್ನು ಪ್ರಾಧಿಕಾರದ ನಿಯಮ, ಪರಿಮಾಣ ಮತ್ತು ಗುಣಮಟ್ಟಕ್ಕೆ ತೃಪ್ತಿಕರವಾಗಿರತಕ್ಕದ್ದು.
11. ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸದೇ ಇದ್ದಲ್ಲಿ ವಿನ್ಯಾಸದ ಅನುಮೋದನೆಗಾಗಿ ಪುನ: ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಆ ಸಂದರ್ಭದಲ್ಲಿ ಇರುವ ಕಾನೂನಿನ ಅಡಿಯಲ್ಲಿ ಅರ್ಜಿಯನ್ನು ಪರಿಶೀಲಿಸಲಾಗುವುದು.

ಪು.ತಿ.ನೋ

12. ಕಾಮಗಾರಿಯನ್ನು ನಿರ್ವಹಿಸುವ ಮೊದಲು ಗುಣನಿಯಂತ್ರಣ ಪರೀಕ್ಷಾ ವರದಿಗಳನ್ನು ನುರಿತ ಸಂಸ್ಥೆಯಿಂದ ಪಡೆದು ಸಂಬಂಧಪಟ್ಟ ವಲಯಾಧಿಕಾರಿಗಳವರಿಗೆ ಸಲ್ಲಿಸಬೇಕು.
13. ಕ.ನ.ನೀ.ಸ. ಮತ್ತು ಒ.ಚ.ಮಂಡಳಿ ಮತ್ತು ಚೆಸ್ಕಾಂ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಕಾರ್ಯನಿರ್ವಹಿಸತಕ್ಕದ್ದು.
14. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ನಿರ್ವಹಿಸಿದಂತೆ As Built Plan ನಕ್ಷೆ ಸಲ್ಲಿಸತಕ್ಕದ್ದು.
15. ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು.
16. ನಿಗಧಿತ ಕಾಲದಲ್ಲಿ ಪೂರ್ಣಗೊಳಿಸದಿದ್ದರೆ, ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಹಣವನ್ನು ನಿಮ್ಮಿಂದ ವಸೂಲು ಮಾಡಲಾಗುವುದು ಅಥವಾ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರಾಧಿಕಾರದ ವತಿಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.
17. ಕಳಪೆ ಕಾಮಗಾರಿಯನ್ನು ನಿರ್ವಹಿಸಿದರೆ, ವಲಯಾಧಿಕಾರಿಗಳ ನಿರ್ದೇಶನದಂತೆ ಕಾಮಗಾರಿಯನ್ನು ಸರಿಪಡಿಸಬೇಕು /ಹೊಸದಾಗಿ ಮಾಡಬೇಕು. ತಪ್ಪಿದಲ್ಲಿ ನಿವೇಶನಗಳನ್ನು ಬಿಡುಗಡೆ ಮಾಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
18. ಎಲ್ಲಾ ಕಾಮಗಾರಿಯನ್ನು ಪೂರ್ಣಗೊಳಿಸಿದ ಮೇಲೆ ಕನಿಷ್ಟ 5 ವರ್ಷಗಳವರೆಗೆ ಹಾಗೂ ಮಹಾನಗರ ಪಾಲಿಕೆಗೆ ಹಸ್ತಾಂತರಿಸುವವರೆಗೂ ನೀವು ನಿರ್ವಹಿಸಿದ ಕಾಮಗಾರಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ.
19. ನೀವು ಬಡಾವಣೆ ರಚಿಸಿದ ಮೇಲೆ As Built Drawing ನ್ನು ವಲಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
20. ಉದ್ಯಾನವನಗಳಿಗೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗಳಿಗೆ ಗ್ರಿಲ್‌ಗಳ ಮೇಲೆ ಮುಡಾ ಎಂಬ ನಾಮಫಲಕವನ್ನು ಅಳವಡಿಸಬೇಕು.

ಕೆಲಸವನ್ನು ಪ್ರಾರಂಭಿಸುವ ದಿನಾಂಕ : 26.03.2016

ಕೆಲಸವನ್ನು ಪೂರ್ಣಗೊಳಿಸುವ ದಿನಾಂಕ : 25.09.2017

ನಿಮ್ಮ ಬಡಾವಣೆಗೆ ನೀರು ಸರಬರಾಜನ್ನು ಮತ್ತು ಒಳಚರಂಡಿ ಹಾಗೂ ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಆಯಾಯಾ ಇಲಾಖೆಯಿಂದ ಅನುಮತಿಯನ್ನು ಪಡೆಯತಕ್ಕದ್ದು. ಎಲ್ಲಾ ಕಾಮಗಾರಿಗಳು ಮುಗಿದ ನಂತರ ಸಂಬಂಧಪಟ್ಟ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿ, ನಿಯಮಾನುಸಾರ ನಿವೇಶನಗಳನ್ನು ಬಿಡುಗಡೆ ಮಾಡಿಸಿಕೊಳ್ಳಬೇಕು.

ತಮ್ಮ ವಿಶ್ವಾಸಿ

**ಅಧೀಕ್ಷಕ ಅಭಿಯಂತರರು**

ಮೈ.ನ.ಪ್ರಾ. ಮೈಸೂರು.